**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ ತಿ.ನರಸೀಪುರ.**

**ಸಿ ಸಿ ನಂ.249/2021**

| | | |
|---|---|---|
| ಸಾಕ್ಷಿದಾರರ ಹೆಸರುಃ | ಪುಟ್ಟಲಿಂಗಯ್ಯ | ಸಿ ಡಬ್ಲ್ಯೂಃ 1 |
| ತಂದೆಯ ಹೆಸರುಃ | ಬೋರಯ್ಯ | ಪಿ ಡಬ್ಲ್ಯೂಃ 1 |
| ವಯಸ್ಸುಃ | 60 ವರ್ಷ | |
| ಉದ್ಯೋಗಃ | ವ್ಯವಸಾಯ | ಪ್ರ.ವ .ಬೋ.ದಿಃ |
| ವಾಸಸ್ಥಳಃ | ದೊಡ್ಡಮೂಲಗೂಡು ಗ್ರಾಮ | **18.12.2023** |

**ಮುಖ್ಯ ವಿಚಾರಣೆಃ** ಮಾನ್ಯ **ಎಪಿಪಿ** ರವರಿಂದಃ

ಈ ಪ್ರಕರಣದ ಆರೋಪಿತರು ನನಗೆ ಗೊತ್ತು. ಸದರಿಯವರು ನಮ್ಮ ಗ್ರಾಮದ ನಿವಾಸಿಗಳು ಆಗಿರುತ್ತಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 14.06.2020 ರಂದು ಬೆಳಿಗ್ಗೆ 9.00 ಗಂಟೆ ಸಮಯದಲ್ಲಿ ನಾನು ನನ್ನ ಜಮೀನಿನಲ್ಲಿ ಜೋಳ ಚೆಲ್ಲಿದ್ದು, ಹಸುವಿಗೆ ಮೇಯು ಕುಯ್ಯುತ್ತಿದ್ದ ಸಮಯದಲ್ಲಿ ಆರೋಪಿತರು ಅಲ್ಲಿಗೆ ಬಂದಿದ್ದು, 2 ನೇ ಆರೋಪಿಯು ನನಗೆ ಬೋಳಿಮಗನೇ, ಸೂಳೆಮಗನೇ ಎಂದು ಅವಾಚ್ಯ ಶಬ್ಧಗಳಿಂದ ಬೈದು, ಇದು ನಿನ್ನ ಅಪ್ಪನ ಜಮೀನಾ ಎಂದು ಹೇಳಿರುತ್ತಾರೆ. 2 ನೇ ಆರೋಪಿಯು ಬಂದು ನನಗೆ ಕೈಯಿಂದ ಹೊಡೆದಿರುತ್ತಾನೆ. 1 ನೇ ಆರೋಪಿಯು ನನ್ನನ್ನು ತಬ್ಬಿ ಹಿಡಿದುಕೊಂಡಿರುತ್ತಾನೆ ಹಾಗೂ ಹೊಡೆದಿರುತ್ತಾನೆ. ನಂತರ ನನ್ನನ್ನು ಕೆಳಗೆ ಕೆಡವಿಕೊಂಡು ಆರೋಪಿತರು ನನ್ನನ್ನು ತುಳಿದಿರುತ್ತಾರೆ. ಆರೋಪಿತರು ಬೋಳಿಮಗನೇ ಇನ್ನೊಂದು ಬಾರಿ ಜಮೀನಿನ ಹತ್ತಿರ ಬಂದರೇ ನಿನ್ನನ್ನು ಸಾಯಿಸುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ. ಆ ಸಮಯದಲ್ಲಿ ಪಕ್ಕದ ಜಮೀನಿನವರಾದ ಚಾಸಾ-2 ರಿಂದ ಚಾಸಾ-4 ಮತ್ತು 7 ರವರು ಬಂದು ಬಿಡಿಸಿರುತ್ತಾರೆ. ನಂತರ ನನ್ನ ಮಗ ನನ್ನನ್ನು ಕರೆದುಕೊಂಡು ಬನ್ನೂರು ಪೊಲೀಸ ಠಾಣೆಗೆ ಹೋಗಿದ್ದು, ಅಲ್ಲಿ ದೂರು ಕೊಟ್ಟ ನಂತರ ಆಸ್ಪತ್ರೆಗೆ ಹೋಗಿರುತ್ತೇವೆ.

ಅದೇ ದಿನ ಸಂಜೆ 4.00 ಗಂಟೆ ಸಮಯಕ್ಕೆ ಪೊಲೀಸರು ಕೃತ್ಯ ಸ್ಥಳಕ್ಕೆ ಬಂದಿದ್ದು, ಅಲ್ಲಿ ನಾನು ತೋರಿಸಿದಂತೆ ಚಾಸಾ-6 ಮತ್ತು 7 ರವರ ಸಮಕ್ಷಮ ಸಂಜೆ 4.00 ಗಂಟೆಯಿಂದ 4.30 ರವರೆಗೆ ಪಂಚನಾಮೆ ಮಾಡಿರುತ್ತಾರೆ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ.

ಸಾಕ್ಷಿಯು ತಾವು ನೀಡಿದ ದೂರನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ-1** ಎಂದು, ಸಾಕ್ಷಿ ಸಹಿಯನ್ನು **ನಿಪಿ-1 ಎ** ಎಂದು ಗುರುತಿಸಲಾಯಿತು. ಕೃತ್ಯ ಸ್ಥಳ ಹಾಗೂ ಜಪ್ತು ಪಂಚನಾಮೆಯನ್ನು **ನಿಪಿ-2** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-2 ಎ** ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 2 ಮತ್ತು 3 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿ ಗೈರು ಹಾಜರಾಗಿದ್ದು, ಆತನ ಗುರುತಿಸುವಿಕೆಗೆ ಯಾವುದೇ ತಕರಾರು ಇರುವುದಿಲ್ಲ, ಆತನ ಪರ ವಕೀಲರು ತಿಳಿಸಿರುತ್ತಾರೆ.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀ **ಜಿ.ಎಸ್** ವಕೀಲರಿಂದಃ

ನನಗೆ ಓದಲು ಹಾಗೂ ಬರೆಯಲು ಬರುತ್ತದೆ. ನಿಪಿ-1 ದೂರನ್ನು ನಾನು ಬರೆದಿರುವುದಿಲ್ಲ, ಆದರೆ ನನಗೆ ಪರಿಚಯ ಇರುವವರು ಬರೆದಿರುತ್ತಾರೆ. ಜಮೀನು ಕ್ರಯಕ್ಕೆ ಪಡೆದ ಬಾಬ್ತು ದಾಖಲೆಗಳನ್ನು ತನಿಖಾಧಿಕಾರಿಗೆ ನೀಡಿರುತ್ತೇನೆ. ನಿವೇಶನ ಕಂದಾಯ ನಿವೇಶನ ಆಗಿರುತ್ತದೆ. ಆಲೆ ಮನೆಯನ್ನು 1989 ರಲ್ಲಿ ನಾನೇ ಕಟ್ಟಿಸಿರುತ್ತೇನೆ. ಆಲೆ ಮನೆ ಕಟ್ಟಿಸಿದ ಬಾಬ್ತು ಪಂಚಾಯತಿಯಿಂದ ಪರವಾನಿಗೆ ಪಡೆದುಕೊಂಡಿರುತ್ತೇನೆ ಹಾಗೂ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಜೋಳ ಕುಯ್ಯುತ್ತಿರುವಾಗ ಮೊದಲು 2 ನೇ ಆರೋಪಿ ಬಂದಿರುತ್ತಾರೆ ನಂತರ ಉಳಿದವರು ಬಂದಿರುತ್ತಾರೆ. 1 ನೇ ಆರೋಪಿಗೆ ನನ್ನ ಸಂಬಂಧಿಕರ ಮಗಳನ್ನು ಮದುವೆ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿ. ಗಲಾಟೆಯ ದಿನ 1 ನೇ ಆರೋಪಿ ಅಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಜಮೀನಿನ ಕೇಸಿಗೆ ಸಂಬಂಧಿಸಿದಂತೆ ಅನುಕೂಲವಾಗಲೆಂದು ಆತನ ಹೆಸರನ್ನು ಈ ಪ್ರಕರಣದಲ್ಲಿ ಸೇರಿಸಿರುತ್ತೇನೆ

ಎಂದರೆ ಸರಿಯಲ್ಲ. ಗಲಾಟೆ ಸಮಯದಲ್ಲಿ ಮೊದಲು ಮತ್ತು ನಾನು ಆರೋಪಿತರು ಇದ್ದೆವು, ನಂತರ ಇತರ ಜನರು ಬಂದಿರುತ್ತಾರೆ. ಚಾಸಾ-2 ರಿಂದ 7 ರವರು ನನ್ನ ಸಂಬಂಧಿಕರು ಎಂದರೆ ಸಾಕ್ಷಿಯು ಊರಿನವರೆಲ್ಲಾ ನನ್ನ ಸಂಬಂಧಿಕರು ಎಂದು ನುಡಿಯುತ್ತಾರೆ. ಚಾಸಾ-7 ಮತ್ತು ಆರೋಪಿತರು ಒಂದೇ ಊರಿನವರು ಎಂದರೆ ಸರಿ. ಫೋನ್ ಮಾಡಿದ ಕೂಡಲೇ ನನ್ನ ಮಗ ಚಾಸಾ-5 ಕೂಡಲೇ ಅಲ್ಲಿಗೆ ಬಂದಿರುತ್ತಾನೆ. ಕೃತ್ಯ ಸ್ಥಳದಿಂದ ನಮ್ಮ ಊರು ಸುಮಾರು 2 ಕಿ.ಮೀ ದೂರದಲ್ಲಿ ಇರುತ್ತದೆ. ಜೋಳ ಕುಯ್ಯತ್ತಿದ್ದ ಸ್ಥಳ ಸರ್ವೇ ನಂ.151/2 ರ ಪಹಣಿಯಲ್ಲಿ ಆರೋಪಿತರ ತಂದೆಯ ಹೆಸರು ಬರುತ್ತದೆ ಎಂದರೆ ಸರಿ. ಸದರಿ ಆಸ್ತಿಗೆ ಸಂಬಂಧಿಸಿದಂತೆ ಇದೇ ನ್ಯಾಯಾಲಯದಲ್ಲಿ ಓ.ಎಸ್ ನಂ.257/2019 ರಂತೆ ದಾವೆ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಸದರಿ ದಾವೆಯನ್ನು ನನ್ನ ವಿರುದ್ಧ ಹಾಕಿರುತ್ತಾರೆ ಎಂದು ನಾನು ಆರೋಪಿತರ ವಿರುದ್ಧ ದುರುದ್ದೇಶದಿಂದ ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-5 ಮೊದಲು ನನಗೆ ಬನ್ನೂರು ಪೊಲೀಸ ಠಾಣೆಗೆ ಕರೆದುಕೊಂಡು ಹೋಗಿದ್ದು, ನಂತರ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. 1 ನೇ ಆರೋಪಿಯು ನನ್ನನ್ನು ತಬ್ಬಿ ಹಿಡಿದುಕೊಂಡಿದ್ದು, 2 ನೇ ಆರೋಪಿಯು ನನಗೆ ಹೊಟ್ಟೆಗೆ ಹೊಡೆದಿರುತ್ತಾರೆ. ದೂರು ಕೊಟ್ಟ ನಂತರ ಪುನಃ ನಾನು ಪೊಲೀಸ ಠಾಣೆಗೆ ಹೋಗಿರುತ್ತೇನೆ.

ಆರೋಪಿತರು ನನ್ನ ಮತ್ತು ಸಾಕ್ಷಿದಾರರ ವಿರುದ್ಧ ಸಿಸಿ ನಂ.2383/2021 ರಂತೆ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ಜೋಳ ಕುಯ್ಯತ್ತಿದ್ದ ಜಮೀನು 1 ಮತ್ತು 2 ನೇ ಆರೋಪಿತರ ತಂದೆಗೆ ಸೇರಿರುತ್ತದೆ ಎಂದರೆ ಸಾಕ್ಷಿಯು ಅವರ ತಂದೆಯಿಂದ ನಾನು ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಆದಕಾರಣ ಆರೋಪಿತರೇ ಜೋಳ ಚೆಲ್ಲಿದ್ದು, ಅವರೇ ಜೋಳ ಕುಯ್ಯುತ್ತಿದ್ದರು ಎಂದರೆ ಸರಿಯಲ್ಲ. ನಾನು ಹಾಗೂ ಸಾಕ್ಷಿದಾರರು ದುರುದ್ದೇಶದಿಂದ ಗುಂಪುಕಟ್ಟಿಕೊಂಡು ಆರೋಪಿತರಿಗೆ ಹೊಡೆದಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ನನ್ನನ್ನು ತಬ್ಬಿ ಹಿಡಿದುಕೊಂಡಿರುವುದಿಲ್ಲ, ಬೈದಿರುವುದಿಲ್ಲ ಹಾಗೂ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು ಕೃತ್ಯ ಸ್ಥಳಕ್ಕೆ ಬಂದಿರಲಿಲ್ಲ ಹಾಗೂ ಆರೋಪಿತರ ವಿರುದ್ಧ ದುರುದ್ದೇಶದಿಂದ ಸುಳ್ಳು ಪ್ರಕರಣ

ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**

**ತಿ.ನರಸೀಪುರ.**